**ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಬೈಲಹೊಂಗಲ**

**ಸಿ.ಸಿ. ನಂ.1480/2022**

**ಚಾ.ಸಾ. - 6**
**ಪ್ರಾ.ಸಾ. - 4**

**ಸಾಕ್ಷಿದಾರರ ಹೆಸರು** ಃ ಕಾಶವ್ವ ಮಹಂತೇಶ ಪಠಾತ

**ಸಾಕ್ಷಿದಾರರ ವಯಸ್ಸು** ಃ 46 ವರ್ಷ

**ಸಾಕ್ಷಿದಾರರ ಉದ್ಯೋಗ**ಃ ಮನೆಗೆಲಸ

**ಸಾಕ್ಷಿದಾರರ ವಿಳಾಸ** ಃ ಗುಡಿಕಟ್ಟಿ

**ಪ್ರಮಾಣ ವಚನ ಮಾಡಿದ ದಿನಾಂಕ ಃ 07-11-2023**

**ಮುಖ್ಯ ವಿಚಾರಣೆ ಃ ಎಪಿಪಿ ಅವರಿಂದ**

ಮೃತ ಮಹಂತೇಶ ನನ್ನ ಗಂಡ. ಸದರಿಯವರು ಈಗ 2 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಮೃತ ಪಟ್ಟಿರುತ್ತಾರೆ. ನಂತರ ವಿಷಯ ತಿಳಿದು ನಾನು ಮತ್ತು ಚಾಸಾ-1 ಬೆಳಗಾಗವಿ ಆಸ್ಪತ್ರೆಗೆ ಹೋಗಿರುತ್ತೇವೆ. ಅಲ್ಲಿಂದ ಅವರನ್ನು ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ದಾಖಲಿಸಿದ್ದು ನಂತರ ಚಿಕಿತ್ಸೆ ಫಲಕಾರಿಯಾಗದೇ ತೀರಿಕೊಂಡಿರುತ್ತಾರೆ. ನಂತರ ಪೊಲೀಸರಿಗೆ ಶವ ತೋರಿಸಿದ್ದು ಪೊಲೀಸರು ಶವ ಪಂಚನಾಮೆಯನ್ನು ಮಾಡಿರುತ್ತಾರೆ. ಅಪಘಾತವು ಹೇಗೆ ಮತ್ತು ಯಾರ ತಪ್ಪಿ ನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಘಟನೆಯ ಕುರಿತು ಹೆಚ್ಚಿ ನ ಮಾಹಿತಿ ಇರುವುದಿಲ್ಲ. ಪೊಲೀಸರಿಗೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**( ಈ ಹಂತದಲ್ಲಿ ಸಾಕ್ಷಿಯನ್ನು ಅಭಿಯೋಜಕರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಃ ಎಪಿಪಿ ಅವರಿಂದ**

ನಾನು ಮತ್ತು ಚಾಸಾ-1 ಬೆಂಗಳೂರಿನಲ್ಲಿ ಇರುತ್ತಿದ್ದೆವು ಎಂದರೆ ಸರಿ. ದಿಃ 8.3.2022 ರಂದು ರಾತ್ರಿ 10.00 ಗಂಟೆ ಸುಮಾರಿಗೆ ಚಾಸಾ-1 ರವರಿಗೆ ಚಾಸಾ-7 ರವರು ಪೋನ ಮಾಡಿ ಬೆಳವಡಿ - ಬೈಲಹೊಂಗಲ ರಸ್ತೆಯ ಮೇಲೆ ಖಂಡೋಜಿಯವರ ಹೊಲದ ಹತ್ತಿರ ಆರೋಪಿ ತನ್ನ ಮೊಟರಸೈಕಲ ನಂ ಕೆಎ 24 ಎಕ್ಸ 9158 ರ ಮೇಲೆ ಮೃತ ಮಹಂತೇಶ ಈತನನ್ನು ಕೂಡಿಸಿಕೊಂಡು ಅತೀ ಜೋರಾಗಿ

ಮತ್ತು ನಿರ್ಲಕ್ಷ್ಯತನದಿಂದ ಚಲಾಯಿಸಿಕೊಂಡು ಹೋಗಿ ರಸ್ತೆಯ ಪಕ್ಕದಲ್ಲಿ ಇರುವ ಗೂಟಕಲ್ಲಿಗೆ ಹಾಯಿಸಿ ಅಪಘಾತ ಪಡಿಸಿರುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಮಹಂತೇಶ ಈತನಿಗೆ ತಲೆಗೆ ಕಿವಿಗೆ ಮತ್ತು ಇತರೆ ಭಾಗಗಳಿಗೆ ಭಾರಿ ಪೆಟ್ಟಾಗಿದ್ದು ಆಸ್ಪತ್ರೆಗೆ ದಾಖಲಿಸಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಕಿಮ್ಸ ಆಸ್ಪತ್ರೆಯಲ್ಲಿ ಮಹಂತೇಶ ಈತನು ಮೃತ ಪಟ್ಟಿದ್ದು ದಿಃ10.3.2022 ರಂದು ಪೊಲೀಸರಿಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿಯು ಪರಿಚಯ ಇರುವ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದ**

**ಆರೋಪಿತರ ಪರ ವಕೀಲರು ಪಾಟೀ ಸವಾಲು ಏನೂ ಇಲ್ಲ ಎಂದು ಹೇಳುತ್ತಾರೆ.**

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

**ಹೆ ಪ್ರ ದ ನ್ಯಾ ದಂ ನ್ಯಾ ಬೈಲಹೊಂಗಲ**